ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟ

UNIVERSITY OF HORTICULTURAL SCIENCES, BAGALKOT

I.C.A.R. - KRISHI VIGYAN KENDRA, KOLAR

ಭಾ.ಕೃ.ಸಂ.ಮಂ.– ಕೃಷಿ ವಿಜ್ಞಾನ ಕೇಂದ್ರ, ಕೋಲಾರ

# NEWS LETTER / ವಾರ್ತಾ ಪತ್ರಿಕೆ

ಸಂಪುಟ: 2 ಅಕ್ಟೋಬರ್–ಡಿಸೆಂಬರ್ – 2014 ಸಂಚಿಕೆ: 3

## ವಿಸ್ತರಣಾ ನಿರ್ದೇಶಕರ ಅನಿಸಿಕೆಗಳು



**ಡಾ. ಎ. ಬಿ. ಪಾಟೀಲ್**
ವಿಸ್ತರಣಾ ನಿರ್ದೇಶಕರು

ಕೃಷಿ ವಿಜ್ಞಾನ ಕೇಂದ್ರ, ಕೋಲಾರವು ರೈತರ ಬೆಳೆ ಉತ್ಪಾದನೆಗೆ ಸಂಬಂಧಪಟ್ಟ ಸಮಸ್ಯೆಗಳಿಗೆ ಸ್ಪಂದಿಸುವುದರ ಜೊತೆಗೆ ನಿಧಾನವಾಗಿ ಹಲವಾರು ಕಾರ್ಯಕ್ರಮಗಳನ್ನು ವಿವಿಧ ರೀತಿಯಲ್ಲಿ ಹಮ್ಮಿಕೊಳ್ಳುವ ಮೂಲಕ ತನ್ನ ಚಟುವಟಿಕೆಗಳನ್ನು ವಿಸ್ತರಿಸುತ್ತಿದೆ. ಈ ಕೇಂದ್ರವು ರೈತರ ಅನುಕೂಲಕ್ಕಾಗಿ ಹಲವಾರು ತರಬೇತಿ ಮತ್ತು ತಾಂತ್ರಿಕ ಕಾರ್ಯಗಾರಗಳನ್ನು ಹಮ್ಮಿಕೊಂಡಿರುವುದು ನನಗೆ ಹರ್ಷವನ್ನುಂಟುಮಾಡಿದೆ. ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳು ರೈತರ ಸಮಸ್ಯೆಗಳಿಗೆ ಶೀಘ್ರವಾಗಿ ಸ್ಪಂದಿಸುತ್ತಿದ್ದು, ಹೊಲಗಳಿಗೆ ಭೇಟಿ ನೀಡುವ ಮೂಲಕ ಮತ್ತು ದೂರವಾಣಿ ಮುಖಾಂತರ ಸೂಕ್ತ ತಾಂತ್ರಿಕತೆ ಮತ್ತು ಸಲಹೆಗಳನ್ನು ನೀಡುತ್ತಿದ್ದಾರೆ. ಇದರ ಜೊತೆಗೆ ಕೃಷಿ ವಿಜ್ಞಾನ ಕೇಂದ್ರವು ಪ್ರತಿನಿತ್ಯ ರೈತರಿಗೆ ಸಹಾಯವಾಗುವಂತೆ ಕೃಷಿ ಚಟುವಟಿಕೆಗಳಿಗೆ ಸಂಬಂಧಪಟ್ಟ ಉಪಯುಕ್ತವಾದ ಚುಟುಕು ಸಂದೇಶಗಳನ್ನು (ರೈತರ ಮೊಬೈಲ್ ಸಲಹಾ ಸೇವೆ) ಅಂತರ್ಜಾಲದ ಮೂಲಕ ನೀಡುತ್ತಿದೆ ಎಂದು ತಿಳಿಸಲು ಹರ್ಷಿಸುತ್ತೇನೆ.

## ಮಾವು ಮರಗಳ ಒಣಗುವಿಕೆ ಕುರಿತು ಜಂಟಿ ಸಮೀಕ್ಷೆ

ದಿನಾಂಕ: 29.10.2014 ರಂದು ಡಾ॥ ಡಿ.ಎಲ್.ಮಹೇಶ್ವರ, ಗೌರವಾನ್ವಿತ ಉಪಕುಲಪತಿಗಳು, ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟ, ಡಾ॥ ವಿ.ನಾಚೇಗೌಡ, ಡೀನ್ ತೋಟಗಾರಿಕೆ ಮಹಾವಿದ್ಯಾಲಯ, ಕೋಲಾರ, ಡಾ॥ ಎಂ.ಕೆ. ಹೊನ್ನಬೈರಯ್ಯ, ಸಹ ಸಂಶೋಧನಾ ಮತ್ತು ವಿಸ್ತರಣಾ ನಿರ್ದೇಶಕರು, ತೋಟಗಾರಿಕೆ ಸಂಶೋಧನೆ ಮತ್ತು ವಿಸ್ತರಣಾ ಕೇಂದ್ರ, ಹೊಗಳಗೆರೆ, ಶ್ರೀ ಕೆ. ತುಳಸಿರಾಮ್, ಕಾರ್ಯಕ್ರಮ ಸಂಯೋಜಕರು, ಕೃಷಿ ವಿಜ್ಞಾನ ಕೇಂದ್ರ, ಕೋಲಾರ, ಶ್ರೀ. ಎಂ.ಆರ್. ಚಂದ್ರಶೇಖರ್, ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಕೋಲಾರ, ಡಾ॥ ಸೋಮು, ಉಪ ನಿರ್ದೇಶಕರು, ಮಾವು ಅಭಿವೃದ್ಧಿ ಮಂಡಳಿ, ಹೊಗಳಗೆರೆ, ಶ್ರೀ ಶ್ರೀನಿವಾಸಗೌಡ, ಅಧ್ಯಕ್ಷರು, ಮಾವು ಬೆಳೆಗಾರರ ಸಂಘ, ಚಿಕ್ಕಬಳ್ಳಾಪುರ ಜಿಲ್ಲೆ, ಶ್ರೀ ಚಂದ್ರಾರೆಡ್ಡಿ ಅಧ್ಯಕ್ಷರು, ಮಾವು ಬೆಳೆಗಾರರ ಸಂಘ, ಕೋಲಾರ ಜಿಲ್ಲೆ ಹಾಗೂ ಪ್ರಗತಿಪರ ರೈತರು ಇವರ ಸಂಯುಕ್ತ ಆಶ್ರಯದಲ್ಲಿ ಒಣಗಿದ ಮಾವು ತೋಟಗಳ ಜಂಟಿ ಸಮೀಕ್ಷೆಯನ್ನು ಕೈಗೊಳ್ಳಲಾಯಿತು. ಅತಿಯಾಗಿ ಹಾನಿಗೊಳಗಾಗಿರುವ ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲ್ಲೂಕು ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲ್ಲೂಕುಗಳ ಮಾವಿನ ತೋಟಗಳಿಗೆ ಭೇಟಿ ನೀಡಿ ಮಾವಿನ ಮರಗಳ ಒಣಗುವಿಕೆಗೆ ತಾಂತ್ರಿಕ ಕಾರಣಗಳನ್ನು ಗಮನಿಸಲಾಯಿತು ಮತ್ತು ಇದಕ್ಕೆ ಸಂಬಂಧಿಸಿದಂತೆ ಸೂಕ್ತ ನಿರ್ವಹಣಾ ಕ್ರಮಗಳ ಬಗ್ಗೆ ಬೆಳೆಗಾರರೊಂದಿಗೆ ಚರ್ಚಿಸಿ ಅಳವಡಿಸಿಕೊಳ್ಳಲು ಸೂಚಿಸಲಾಯಿತು.





## ಸ್ವಚ್ಛ ಭಾರತ ಅಭಿಯಾನದಲ್ಲಿ ಭಾಗಿ



ಕೃಷಿ ವಿಜ್ಞಾನ ಕೇಂದ್ರ, ಕೋಲಾರ ವತಿಯಿಂದ ದಿ: 02.10.2014 ರಂದು ಹೂಹಳ್ಳಿ ಗ್ರಾಮದಲ್ಲಿ ಸ್ವಚ್ಛ ಭಾರತ ಆಂದೋಲನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಸದರಿ ಕಾರ್ಯಕ್ರಮದಲ್ಲಿ ಕೃಷಿ ವಿಜ್ಞಾನ ಕೇಂದ್ರ ಕೋಲಾರದ ಮುಖ್ಯಸ್ಥರಾದ ಕೆ. ತುಳಸಿರಾಮ್, ರೇಷ್ಮೆ ಕೃಷಿ ವಿಷಯ ತಜ್ಞರಾದ ಡಾ. ಶಶಿಧರ್ ಕೆ.ಆರ್, ಕೋಲಾರ ವಿಭಾಗದ ರೇಷ್ಮೆ ಕೃಷಿ ಸಹಾಯಕ ನಿರ್ದೇಶಕರಾದ ಶ್ರೀ ಬಿ.ಎಲ್ ಕೃಷ್ಣಪ್ಪ ಮತ್ತು ಸಿರಿಕೇರ್ ಪ್ರೈ. ಲಿ. ಶ್ರೀ ಸುರೇಶರವರು ಹಾಜರಿದ್ದು ಅಭಿಯಾನದಲ್ಲಿ ಭಾಗವಹಿಸಿದ ಸುಮಾರು 25 ರೇಷ್ಮೆ ಬೆಳೆಗಾರರಿಗೆ ಪ್ರತಿಜ್ಞಾ ವಿಧಿಯನ್ನು ಬೋಧಿಸಲಾಯಿತು. ನಂತರ ರೇಷ್ಮೆ ಹುಳು ಸಾಕಾಣಿಕೆಯಲ್ಲಿ ನೈರ್ಮಲ್ಯತೆ ಮಹತ್ವದ ಬಗ್ಗೆ ತಿಳಿಸಲಾಯಿತು.

## ವಿಶ್ವ ಆಹಾರ ದಿನಾಚರಣೆ



ಕೃಷಿ ವಿಜ್ಞಾನ ಕೇಂದ್ರ, ಕೋಲಾರ ವತಿಯಿಂದ **"ವಿಶ್ವ ಆಹಾರ ದಿನಾಚರಣೆಯನ್ನು"** ದಿ: 16.10.2014 ರಂದು ತೋಟಗಾರಿಕಾ ಮಹಾವಿದ್ಯಾಲಯದ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಡಾ. ವಿ. ನಾಚೇಗೌಡ, ಡೀನ್, ತೋ.ಮ.ವಿ, ಕೋಲಾರರವರು ನೆರವೇರಿಸಿ ಈ ವರ್ಷದ ಧ್ಯೇಯ ವಾಕ್ಯ **"ಕುಟುಂಬ ಆಧಾರಿತ ಕೃಷಿ–ವಿಶ್ವದ ಪೋಷಣೆ ಭೂಮಿಯ ಆರೈಕೆ"** ಕುರಿತು ಮಾತನಾಡಿದರು. ಶ್ರೀಮತಿ ಪ್ರೇಮಲತ, ಬಿ.ಆರ್, ವಿಷಯ ತಜ್ಞರು (ಬೇಸಾಯಶಾಸ್ತ್ರ) ರೈತರಿಗೆ ಕುಟುಂಬ ಆಧಾರಿತ ಕೃಷಿಯ ಪ್ರಾಮುಖ್ಯತೆಯನ್ನು ತಿಳಿಸಿದರು. ಡ್ಯುಪಾಂಟ್ ಕಂಪನಿಯ ವೆಂಕಟೇಶ ಕುಲಕರ್ಣಿಯವರು ಕೀಟನಾಶಕಗಳ ಸುರಕ್ಷಿತ ಬಳಕೆ ಕುರಿತು ಮಾಹಿತಿ ನೀಡಿದರು. ಕೃಷಿ ವಿಜ್ಞಾನ ಕೇಂದ್ರ ಕೋಲಾರದ ಮುಖ್ಯಸ್ಥರಾದ ಶ್ರೀ ಕೆ. ತುಳಸಿರಾಮ್ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಕೋಲಾರ ತಾಲ್ಲೂಕಿನ ಕೃಷಿ ಇಲಾಖೆಯ ಸಹಾಯಕ ನಿರ್ದೇಶಕರಾದ ಶ್ರೀ ರಂಗಸ್ವಾಮಿ, ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಸುಮಾರು 80 ರೈತ ಮತ್ತು ರೈತಮಹಿಳೆಯರು ಕಾರ್ಯಕ್ರಮದಲ್ಲಿ ಹಾಜರಿದ್ದು ಪ್ರಯೋಜನವನ್ನು ಪಡೆದುಕೊಂಡರು.

## ದ್ವೈಮಾಸಿಕ ಕಾರ್ಯಾಗಾರ

ಕೃಷಿ ಇಲಾಖೆ, ಕೋಲಾರ ಮತ್ತು ಕೃಷಿ ವಿಜ್ಞಾನ ಕೇಂದ್ರ ಕೋಲಾರವು ದಿ: 20.10.2014 ಹಾಗೂ 21.10.2014 ರಂದು ಕೃಷಿಗೆ ಸಂಬಂಧಿಸಿದ ವಿವಿಧ ಇಲಾಖಾ ಅಧಿಕಾರಿಗಳಿಗೆ ದ್ವೈಮಾಸಿಕ ಕಾರ್ಯಾಗಾರವನ್ನು

ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಶ್ರೀ ರಾಜು, ಕೃಷಿ ಜಂಟಿ ನಿರ್ದೇಶಕರು, ಕೋಲಾರ, ಡಾ. ನಾಗಭೂಷಣ ಸಹ ವಿಸ್ತರಣಾ ನಿರ್ದೇಶಕರು, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು, ಡಾ. ನಾರಾಯಣಸ್ವಾಮಿ, ಪ್ರಾಧ್ಯಾಪಕರು (ತೋಟಗಾರಿಕೆ) ಕೃಷಿ ವಿಶ್ವವಿದ್ಯಾಲಯ ಬೆಂಗಳೂರು, ಕೃಷಿ ವಿಜ್ಞಾನ ಕೇಂದ್ರ, ಚಿಂತಾಮಣಿಯ ಕಾರ್ಯಕ್ರಮ ಸಂಯೋಜಕರಾದ ಡಾ. ಮಂಜುನಾಥಗೌಡ ಮತ್ತು ಡಾ. ಆನಂದ್, ವಿಷಯ ತಜ್ಞರು (ಬೇಸಾಯ), ಭಾಗವಹಿಸಿದ್ದರು. ಸದರಿ ಕಾರ್ಯಕ್ರಮದಲ್ಲಿ ಎಲ್ಲಾ ತಾಲ್ಲೂಕುಗಳ ಕೃಷಿ ಸಹಾಯಕ ನಿರ್ದೇಶಕರುಗಳು, ಕೃಷಿ ಅಧಿಕಾರಿಗಳು ಹಾಜರಿದ್ದು ತಾಲೂಕಿನ ಹವಾಮಾನ ಮತ್ತು ಬೆಳೆ ವರದಿ ಬಗ್ಗೆ ಮಾಹಿತಿ ನೀಡಿದರು. ಸದರಿ ಕಾರ್ಯಾಗಾರಗಳಲ್ಲಿ ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರಾದ ಕೆ. ತುಳಸಿರಾಮ್, ವಿಷಯ ತಜ್ಞರಾದ ಡಾ. ಬಿ.ಎನ್. ಮಾರುತಿ ಪ್ರಸಾದ್, ಡಾ. ಕೆ.ಆರ್. ಶಶಿಧರ್, ಡಾ. ನೂರುಲ್ಲ ಹಾವೇರಿ ಮತ್ತು ಡಾ. ದೀಪಾ ತೇರದಾಳ ರವರು ಕಾರ್ಯಾಗಾರದಲ್ಲಿ ಭಾಗವಹಿಸಿದ್ದು, ಜಿಲ್ಲೆಯ ಕೃಷಿಗೆ ಸಂಬಂಧಿಸಿದ ಚರ್ಚೆಯಲ್ಲಿ ಭಾಗವಹಿಸಿದರು. ದಿ: 21.10.2014 ರಂದು ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು, ಒಣಬೇಸಾಯ ಕೃಷಿ ತಾಂತ್ರಿಕತೆಗಳ ವಿಭಾಗದಲ್ಲಿ ಆಯೋಜಿಸಿದ್ದ ಸಮಗ್ರ ಮಣ್ಣು ಮತ್ತು ನೀರು ನಿರ್ವಹಣೆ, ಬೆಳೆ ಹಾಗೂ ಬೆಳೆ ಪದ್ಧತಿಗಳ ಪ್ರಾತ್ಯಕ್ಷಿಕೆಯನ್ನು ಜಿಲ್ಲೆಯ ಎಲ್ಲಾ ಕೃಷಿ ಅಧಿಕಾರಿಗಳೊಂದಿಗೆ ಪ್ರವಾಸ ಕೈಗೊಳ್ಳಲಾಗಿತ್ತು.

## ಪತ್ರಿಕಾ ಗೋಷ್ಠಿ



ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ ವಿಸ್ತರಣಾ ನಿರ್ದೇಶಕರಾದ ಡಾ. ಎ.ಬಿ. ಪಾಟೀಲ ರವರು ದಿನಾಂಕ 21-11-2014 ರಂದು ತೋಟಗಾರಿಕೆ ಮಹಾವಿದ್ಯಾಲಯ, ಕೋಲಾರದಲ್ಲಿ ಏರ್ಪಡಿಸಿದ ಪತ್ರಿಕಾ ಗೋಷ್ಠಿಯಲ್ಲಿ ಭಾಗವಹಿಸಿ ಡಿಸೆಂಬರ್ 12 ರಿಂದ 15, 2014 ರವರೆಗೆ ಬಾಗಲಕೋಟೆಯಲ್ಲಿ ನಡೆಯುವ **"ಬೃಹತ್ ಉದ್ಯಾನ ಮೇಳ – ಸಮೃದ್ಧಿಗಾಗಿ ಯಾಂತ್ರೀಕರಣ"** ಮೇಳದಲ್ಲಿ ತೋಟಗಾರಿಕೆ ಹಾಗೂ ಪೂರಕ ಕೃಷಿ ವಿಷಯಗಳಿಗೆ ಸಂಬಂಧಿಸಿದಂತೆ ತಾಂತ್ರಿಕ ವಿಷಯಗಳ ಬಗ್ಗೆ ಹೆಚ್ಚಿನ ಮಾಹಿತಿ ನೀಡುವ ವ್ಯವಸ್ಥೆ ಮಾಡಲಾಗಿದ್ದು ಈ ಭಾಗದ ರೈತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಪತ್ರಿಕೆಗಳ ಮುಖಾಂತರ ಹೆಚ್ಚಿನ ಪ್ರಚಾರಗೊಳಿಸುವಂತೆ ಮಾಧ್ಯಮ ಮಿತ್ರರಿಗೆ ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದರು.

## "ತೋಟಗಾರಿಕೆಯಲ್ಲಿ ಯಾಂತ್ರೀಕರಣ" – ಕಾರ್ಯಾಗಾರ

ಕೃಷಿ ವಿಜ್ಞಾನ ಕೇಂದ್ರ, ಕೋಲಾರ ಮತ್ತು ರಾಷ್ಟ್ರೀಯ ತೋಟಗಾರಿಕೆ ಮಂಡಳಿ, ಬೆಂಗಳೂರು ಇವರ ಸಹಯೋಗದಲ್ಲಿ **"ತೋಟಗಾರಿಕೆಯಲ್ಲಿ ಯಾಂತ್ರೀಕರಣ"** ಕುರಿತು ಕಾರ್ಯಾಗಾರವನ್ನು ದಿ: 21.11.2014 ರಂದು ತೋಟಗಾರಿಕಾ ಮಹಾವಿದ್ಯಾಲಯದ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಾರ್ಯಾಗಾರದ ಉದ್ಘಾಟನೆಯನ್ನು ಶ್ರೀ ಬಾಬುರೆಡ್ಡಿ, ಆಡಳಿತ ಮಂಡಳಿ ನಿರ್ದೇಶಕರು, ರಾಷ್ಟ್ರೀಯ ತೋಟಗಾರಿಕೆ ಮಂಡಳಿ, ಬೆಂಗಳೂರು ನೆರವೇರಿಸಿದರು. ಕಾರ್ಯಾಗಾರದ ಅಧ್ಯಕ್ಷತೆವಹಿಸಿದ್ದ ಡಾ. ಎ.ಬಿ. ಪಾಟೀಲ, ವಿಸ್ತರಣಾ ನಿರ್ದೇಶಕರು, ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟ ಇವರು ಮಾತನಾಡಿ ಇಂದಿನ ಧ್ಯೇಯ ವಾಕ್ಯ **"ಕೃಷಿಕರ ಮಂತ್ರ ಕೃಷಿಯ ಯಂತ್ರ"** ಮತ್ತು "Mechanize Today Prosper Tomorrow" ಎಂದು ಹೇಳಿದರು. ನಂತರ ಶ್ರೀ. ಪಿ.ಕೆ. ಸಿಂಗ್, ಜಂಟಿ ನಿರ್ದೇಶಕರು (ಯಾಂತ್ರೀಕರಣ ವಿಭಾಗ), ರಾಷ್ಟ್ರೀಯ ತೋಟಗಾರಿಕೆ ಮಂಡಳಿ, ನವದೆಹಲಿ ಇವರು ತೋಟಗಾರಿಕೆಯಲ್ಲಿ ಯಾಂತ್ರೀಕರಣದ ಬಗ್ಗೆ ಮಾಹಿತಿ ನೀಡಿದರು, ಶ್ರೀ ದಾಲ್‌ಸಿಂಗ್, ಉಪನಿರ್ದೇಶಕರು, ರಾಷ್ಟ್ರೀಯ ತೋಟಗಾರಿಕೆ ಮಂಡಳಿ, ಬೆಂಗಳೂರು ಇವರು ರೈತರ ಅನುಕೂಲಕ್ಕಾಗಿ ಮಂಡಳಿಯ ಪರಿಷ್ಕೃತ ಯೋಜನೆಗಳ ಬಗ್ಗೆ ಮಾಹಿತಿ ನೀಡಿದರು, ಸಂಪನ್ಮೂಲ ವ್ಯಕ್ತಿಗಳಾಗಿ ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆ, ಬೆಂಗಳೂರು ವತಿಯಿಂದ ಆಗಮಿಸಿದ್ದ ಡಾ. ವೈ.ಟಿ.ಎನ್. ರೆಡ್ಡಿ, ಮುಖ್ಯ ವಿಜ್ಞಾನಿ (ಹಣ್ಣಿನ ಬೆಳೆಗಳು), ಡಾ. ಹೆಬ್ಬಾರ ಮುಖ್ಯ ವಿಜ್ಞಾನಿ (ತರಕಾರಿ ಶಾಸ್ತ್ರ), ಡಾ. ದೊರೆಯಪ್ಪಗೌಡ ಮುಖ್ಯ ವಿಜ್ಞಾನಿ (ಕೋಯ್ಲೋತ್ತರ ತಂತ್ರಜ್ಞಾನ) ಇವರುಗಳು ಹಣ್ಣಿನ ಬೆಳೆಗಳ ಬೇಸಾಯ ಪದ್ಧತಿಯಲ್ಲಿ ಯಾಂತ್ರೀಕರಣದ ಬಗ್ಗೆ, ತರಕಾರಿ ಬೆಳೆಗಳ ಬೇಸಾಯ ಪದ್ಧತಿಯಲ್ಲಿ ಯಾಂತ್ರೀಕರಣ ಬಗ್ಗೆ, ಹಣ್ಣಿನ ಮತ್ತು ತರಕಾರಿ ಬೆಳೆಗಳಲ್ಲಿ ಕೋಯ್ಲೋತ್ತರ ತಂತ್ರಜ್ಞಾನದ ಬಗ್ಗೆ ಮಾಹಿತಿಯನ್ನು ರೈತರಿಗೆ ನೀಡಿದರು. ಡಾ. ಶಿವಣ್ಣ, ಪ್ರಭಾರ ಡೀನ್, ತೋಟಗಾರಿಕಾ ಮಹಾವಿದ್ಯಾಲಯ, ಕೋಲಾರ, ಶ್ರೀ ಗೋಪಾಲಕೃಷ್ಣಗೌಡ, ನಿರ್ದೇಶಕರು, ಹಾಪ್‌ಕಾಮ್ಸ್, ಕೋಲಾರ ಮತ್ತು ಶ್ರೀ ಕೆ. ತುಳಸಿರಾಮ್, ಕಾರ್ಯಕ್ರಮ ಸಂಯೋಜಕರು, ಕೃಷಿ ವಿಜ್ಞಾನ ಕೇಂದ್ರ, ಕೋಲಾರ ಭಾಗವಹಿಸಿದ್ದರು. ಸದರಿ ಕಾರ್ಯಾಗಾರದಲ್ಲಿ ಸುಮಾರು 150 ರೈತರು ಹಾಗೂ ರೈತಮಹಿಳೆಯರು ಹಾಜರಿದ್ದು ಇದರ ಸದುಪಯೋಗವನ್ನು ಪಡೆದುಕೊಂಡರು.





## ಕ್ಷೇತ್ರೋತ್ಸವ / ಪ್ರಾತ್ಯಕ್ಷಿಕೆ / ಗುಂಪು ಚರ್ಚೆ



ಸುಗುಟೂರು ಹೋಬಳಿಯ ಕಲ್ಲೂರು ಗ್ರಾಮದಲ್ಲಿ ಕೃಷಿ ವಿಜ್ಞಾನ ಕೇಂದ್ರ, ಕೋಲಾರದ ವತಿಯಿಂದ **ಬಿಜಿಆರ್–5 ತೊಗರಿ ಸುಧಾರಿತ ತಳಿಯ ಕ್ಷೇತ್ರೋತ್ಸವವನ್ನು** ದಿ: 28.11.2014 ರಂದು ಆಯೋಜಿಸಲಾಗಿತ್ತು. ಸದರಿ ಕಾರ್ಯಕ್ರಮದಲ್ಲಿ ಕೃಷಿ ವಿಜ್ಞಾನ ಕೇಂದ್ರದ ವಿಷಯ ತಜ್ಞರಾದ ಶ್ರೀಮತಿ ಪ್ರೇಮಲತ ಮತ್ತು ನೂರುಲ್ಲಾ ಹಾವೇರಿ ಭಾಗವಹಿಸಿ ತೊಗರಿ ಬೆಳೆಗೆ ಸಂಬಂಧಿಸಿದ ಸುಧಾರಿತ ಬೇಸಾಯ ಪದ್ಧತಿ ಹಾಗೂ ಪೀಡೆ ನಿರ್ವಹಣೆ ಬಗ್ಗೆ ಮಾಹಿತಿ ನೀಡಿದರು. ಶ್ರೀ ಸುನೀಲ್, ಎನ್., ಸಹಾಯಕ ಕೃಷಿ ಅಧಿಕಾರಿ, ರೈತ ಸಂಪರ್ಕ ಕೇಂದ್ರ, ಸುಗಟೂರು ಹಾಗೂ ಸುಮಾರು 30 ಕೃಷಿಕರು ಕಾರ್ಯಕ್ರಮದಲ್ಲಿ ಭಾಗವಹಿಸಿ ಇದರ ಪ್ರಯೋಜನವನ್ನು ಪಡೆದರು.



ಕೃಷಿ ವಿಜ್ಞಾನ ಕೇಂದ್ರ, ಕೋಲಾರದ ವತಿಯಿಂದ ಕೋಲಾರ ಕಸಬಾ ಹೋಬಳಿಯ ಯಡಹಳ್ಳಿ ಗ್ರಾಮದಲ್ಲಿ ದಿ: 01.12.2014 ರಂದು **ಕೆಎಂಆರ್–301 ರಾಗಿ ಸುಧಾರಿತ ತಳಿಯ ಕ್ಷೇತ್ರೋತ್ಸವವನ್ನು** ಆಯೋಜಿಸಲಾಗಿತ್ತು. ಸದರಿ ಕಾರ್ಯಕ್ರಮದಲ್ಲಿ ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರಾದ ಶ್ರೀ ಕೆ. ತುಳಸಿರಾಮ್ ಭಾಗವಹಿಸಿ ರಾಗಿ ಬೆಳೆಗೆ ಸಂಬಂಧಿಸಿದ ಸುಧಾರಿತ ಬೇಸಾಯ ಪದ್ಧತಿ ಹಾಗೂ ಪೀಡೆ ನಿರ್ವಹಣೆ ಬಗ್ಗೆ ಮಾಹಿತಿ ನೀಡಿದರು. ಸುಮಾರು 25 ಕೃಷಿಕರು ಕಾರ್ಯಕ್ರಮದಲ್ಲಿ ಭಾಗವಹಿಸಿ ಇದರ ಪ್ರಯೋಜನವನ್ನು ಪಡೆದರು.



ನಡುಪಳ್ಳಿ ಗ್ರಾಮದಲ್ಲಿ ದಿನಾಂಕ 10.12.2014 ರಂದು ರೇಷ್ಮೆ ಬೆಳೆಗಾರರಿಗೆ ಕೃಷಿ ವಿಜ್ಞಾನ ಕೇಂದ್ರ, ಕೋಲಾರದ ವತಿಯಿಂದ ಊಜಿ ನೊಣದ ನಿಯಂತ್ರಣ ಕ್ರಮಗಳಲ್ಲಿ ಒಂದಾದ ಅಂಟು ಬಲೆ ಮತ್ತು ಊಜಿ ಮಾತ್ರೆ ಬಳಸುವ ಪದ್ಧತಿ ಪ್ರಾತ್ಯಕ್ಷಿಕೆಯನ್ನು ಏರ್ಪಡಿಸಲಾಗಿತ್ತು. ರೇಷ್ಮೆ ಕೃಷಿ ವಿಷಯ ತಜ್ಞರಾದ ಡಾ. ಕೆ.ಆರ್. ಶಶಿಧರ್ ಮತ್ತು ಕ್ಷೇತ್ರ ವ್ಯವಸ್ಥಾಪಕರಾದ ಶ್ರೀ ಉಮೇಶ ನಾಯ್ಕ ಭಾಗವಹಿಸಿ ತೋರಿಸಿಕೊಟ್ಟರು. ಸುಮಾರು 20 ರೇಷ್ಮೆ ಬೆಳೆಗಾರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು, ಇದರ



ಪ್ರಯೋಜನವನ್ನು ಪಡೆದುಕೊಂಡರು.

ದಿನಾಂಕ 30.12.2014 ರಂದು ಮಟ್ನಹಳ್ಳಿ ಗ್ರಾಮದಲ್ಲಿ ಕೃಷಿ ವಿಜ್ಞಾನ ಕೇಂದ್ರ, ಕೋಲಾರದ ವತಿಯಿಂದ ಪರಿಸರ ಸ್ನೇಹಿ ಕ್ರಮದಲ್ಲಿ ಎಲೆ ಸುರುಳಿ ಕೀಟದ ನಿರ್ವಹಣಾ ಕ್ರಮಗಳಿಗೆ ಸಂಬಂಧಿಸಿದಂತೆ ಬೇವಿನ ಬೀಜದ ಕಷಾಯ ತಯಾರಿಸುವಿಕೆ ಮತ್ತು ಸಿಂಪರಣೆ ಬಗ್ಗೆ ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರಾದ ಶ್ರೀ ಕೆ. ತುಳಸಿರಾಮ್ ಮತ್ತು ರೇಷ್ಮೆ ಕೃಷಿ ವಿಷಯ ತಜ್ಞರಾದ ಡಾ. ಕೆ.ಆರ್. ಶಶಿಧರ್ ಗುಂಪು ಚರ್ಚೆಯಲ್ಲಿ ಭಾಗವಹಿಸಿದ್ದರು. ಸುಮಾರು 20 ರೇಷ್ಮೆ ಬೆಳೆಗಾರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು, ಇದರ ಪ್ರಯೋಜನವನ್ನು ಪಡೆದುಕೊಂಡರು.

## ಬೃಹತ್ ಉದ್ಯಾನ ಮೇಳದಲ್ಲಿ ಭಾಗಿ

ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ ವತಿಯಿಂದ ದಿ 12 ರಿಂದ 15 ಡಿಸೆಂಬರ್ 2014 ರಂದು ಏರ್ಪಡಿಸಿದ್ದ ತೋಟಗಾರಿಕೆ ಮೇಳದಲ್ಲಿ ಕೃಷಿ ವಿಜ್ಞಾನ ಕೇಂದ್ರ, ಕೋಲಾರ, ಭಾಗವಹಿಸಿದ್ದು ಕೋಲಾರ ಜಿಲ್ಲೆಯ ತೋಟಗಾರಿಕೆ ಕ್ಷೇತ್ರದಲ್ಲಿನ ಸಾಧನೆಯ ಮಾಹಿತಿ ಫಲಕಗಳು, ಸಜೀವ ಮಾದರಿಗಳು, ಬಿತ್ತಿಪತ್ರಗಳನ್ನು ಪ್ರದರ್ಶಿಸಲಾಯಿತು. ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರಾದ ಶ್ರೀ ಕೆ. ತುಳಸಿರಾಮ್, ವಿಷಯ ತಜ್ಞರಾದ ಡಾ. ಬಿ.ಎನ್. ಮಾರುತಿ ಪ್ರಸಾದ್, ಡಾ. ಕೆ.ಆರ್. ಶಶಿಧರ್, ಡಾ. ನೂರುಲ್ಲ ಹಾವೇರಿ, ಡಾ. ದೀಪಾ ತೇರದಾಳ ಮತ್ತು ಡಾ. ಸಂತೋಷ್ ಎಚ್.ಎಮ್., ರವರು ಮೇಳದಲ್ಲಿ ಭಾಗವಹಿಸಿ ರೈತರಿಗೆ ತಾಂತ್ರಿಕ ಮಾಹಿತಿಗಳನ್ನು ನೀಡಿದರು.






## ರೈತ ದಿನಾಚರಣೆ (ಕಿಸಾನ್ ದಿವಸ್)

ದಿ: 23.12.2014 ರಂದು ಚಿಟ್ನಹಳ್ಳಿ ಗ್ರಾಮದಲ್ಲಿ ಕೃಷಿ ವಿಜ್ಞಾನ ಕೇಂದ್ರ, ಕೋಲಾರ, ರೈತ ಸಂಪರ್ಕ ಕೇಂದ್ರ, ಸುಗಟೂರು ಸಹಯೋಗದಲ್ಲಿ **ರೈತ ದಿನಾಚರಣೆ (ಕಿಸಾನ್ ದಿವಸ್)** ಆಯೋಜಿಸಲಾಗಿತ್ತು. ಸದರಿ ಕಾರ್ಯಕ್ರಮದಲ್ಲಿ ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರಾದ ಶ್ರೀ. ಕೆ. ತುಳಸಿರಾಮ್, ವಿಷಯ ತಜ್ಞರಾದ ಡಾ. ಬಿ.ಎನ್. ಮಾರುತಿ ಪ್ರಸಾದ್, ನೂರುಲ್ಲಾ ಹಾವೇರಿ ಭಾಗವಹಿಸಿ ಮಾವು ಬೆಳೆಯ ಸುಧಾರಿತ ಉತ್ಪಾದನಾ ತಾಂತ್ರಿಕತೆಗಳು ಮತ್ತು ಪೀಡೆ ನಿರ್ವಹಣೆ ಬಗ್ಗೆ ಮಾಹಿತಿ ನೀಡಿದರು. ಶ್ರೀ ಸುನೀಲ್. ಎನ್., ಸಹಾಯಕ ಕೃಷಿ ಅಧಿಕಾರಿ ರೈತ ಸಂಪರ್ಕ ಕೇಂದ್ರ, ಸುಗಟೂರು ಹಾಗೂ ಸುಮಾರು 60 ರೈತರು ರೈತ ದಿನಾಚರಣೆಯಲ್ಲಿ ಭಾಗವಹಿಸಿದ್ದರು.







**ಗಾದೆ ಮಾತು**

ತೋಟದಿಂದ ತಟ್ಟೆಗೆ –
ತಟ್ಟೆಯಿಂದ ಹೊಟ್ಟೆಗೆ



## ತರಬೇತಿ ಕಾರ್ಯಕ್ರಮಗಳು



ಕೃಷಿ ವಿಜ್ಞಾನ ಕೇಂದ್ರ, ಕೋಲಾರ ವತಿಯಿಂದ ದಿ: 10.10.2014 ರಂದು ಹೂಹಳ್ಳಿ ಗ್ರಾಮದಲ್ಲಿ **"ರೇಷ್ಮೆ ಹುಳು ಸಾಕಾಣಿಕೆಯಲ್ಲಿ ಸೋಂಕು ನಿವಾರಣೆ ಮತ್ತು ನೈರ್ಮಲ್ಯತೆಯ ಮಹತ್ವ" ತರಬೇತಿ ಕಾರ್ಯಕ್ರಮವನ್ನು** ಹಮ್ಮಿಕೊಳ್ಳಲಾಗಿತ್ತು. ಕೃಷಿ ವಿಜ್ಞಾನ ಕೇಂದ್ರ ಕೋಲಾರದ ಮುಖ್ಯಸ್ಥರಾದ ಕೆ. ತುಳಸಿರಾಮ್ ರವರು ಮಾತನಾಡಿ ಕೃಷಿ ವಿಜ್ಞಾನ ಕೇಂದ್ರದ ಮುಖ್ಯ ಉದ್ದೇಶಗಳು ಮತ್ತು ನೂತನ ಕೃಷಿ ತಂತ್ರಜ್ಞಾನಗಳ ಜಾಗೃತಿಗಾಗಿ ಸೂಕ್ತ ವಿಸ್ತರಣಾ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದರ ಬಗ್ಗೆ ತಿಳಿಸಿದರು. ರೇಷ್ಮೆಕೃಷಿ ವಿಷಯ ತಜ್ಞರಾದ ಡಾ. ಶಶಿಧರ್ ಕೆ.ಆರ್‌ರವರು ಹುಳು ಸಾಕಾಣಿಕೆಯಲ್ಲಿ ಸೋಂಕು ನಿವಾರಣೆ ಹಾಗೂ ನೈರ್ಮಲ್ಯತೆ ಮಹತ್ವದ ಬಗ್ಗೆ ತಿಳಿಸಿದರು. ಕಾರ್ಯಕ್ರಮದಲ್ಲಿ ಶ್ರೀ ಉಮೇಶ ನಾಯ್ಕ ಕ್ಷೇತ್ರ ವ್ಯವಸ್ಥಾಪಕರು, ಕೃಷಿ ವಿಜ್ಞಾನ ಕೇಂದ್ರ, ಕೋಲಾರ ಮತ್ತು 60 ರೇಷ್ಮೆ ಬೆಳೆಗಾರರು ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಇದರ ಪ್ರಯೋಜನವನ್ನು ಪಡೆದುಕೊಂಡರು.

ಮುಳಬಾಗಿಲು ತಾಲ್ಲೂಕಿನ ಹಿರಣ್ಯಗೌಡನಹಳ್ಳಿ ಗ್ರಾಮದಲ್ಲಿ ದಿ: 11.10.2014 ರಂದು ಕೃಷಿ ವಿಜ್ಞಾನ ಕೇಂದ್ರ, ಕೋಲಾರ ವತಿಯಿಂದ **"ನೆಲಗಡಲೆಯಲ್ಲಿ ಸುಧಾರಿತ ಬೇಸಾಯ ಕ್ರಮಗಳು, ಕೀಟ ಮತ್ತು ರೋಗಗಳ ನಿರ್ವಹಣೆಯ"** ಬಗ್ಗೆ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಸದರಿ ಕಾರ್ಯಕ್ರಮದಲ್ಲಿ ಕೋಲಾರ ಜಿಲ್ಲೆಯ ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರಾದ ಶ್ರೀ ಕೆ. ತುಳಸಿರಾಮ, ವಿಷಯ ತಜ್ಞರುಗಳಾದ ಶ್ರೀಮತಿ ಪ್ರೇಮಲತ ಬಿ.ಆರ್ ಹಾಗೂ ಶ್ರೀ ನೂರುಲ್ಲಾ ಹಾವೇರಿ ಭಾಗವಹಿಸಿ ನೆಲಗಡಲೆಗೆ ಬರುವ ಕೀಟ ಮತ್ತು ರೋಗಗಳ ನಿಯಂತ್ರಣದ ಕ್ರಮಗಳು ಮತ್ತು ಸುಧಾರಿತ ಬೇಸಾಯ ಪದ್ಧತಿಗಳ ಬಗ್ಗೆ ಮಾಹಿತಿಯನ್ನು ನೀಡಿದರು. ಸುಮಾರು 40 ರೈತ ಮತ್ತು ರೈತಮಹಿಳೆಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು ಅದರ ಪ್ರಯೋಜನವನ್ನು ಪಡೆದುಕೊಂಡರು.



ಕೃಷಿ ವಿಜ್ಞಾನ ಕೇಂದ್ರ, ಕೋಲಾರ ವತಿಯಿಂದ ದಿ: 17.10.2014 ರಂದು ಮುಳಬಾಗಿಲು ತಾಲ್ಲೂಕಿನ ಹೊನ್ನಗಾನಹಳ್ಳಿ ಗ್ರಾಮದಲ್ಲಿ **"ಆಲೂಗಡ್ಡೆ ಮತ್ತು ಟೊಮ್ಯಾಟೋ ಬೆಳೆಗಳ ಸುಧಾರಿತ ಬೇಸಾಯ ಪದ್ಧತಿ ಮತ್ತು ಸಮಗ್ರ ಕೀಟ ಮತ್ತು ರೋಗಗಳ ನಿರ್ವಹಣೆ"** ಬಗ್ಗೆ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕೃಷಿ ವಿಜ್ಞಾನ ಕೇಂದ್ರ ಕೋಲಾರದ ಮುಖ್ಯಸ್ಥರಾದ ಶ್ರೀ ಕೆ. ತುಳಸಿರಾಮ್, ಸಸ್ಯ ಸಂರಕ್ಷಣೆ ವಿಷಯ ತಜ್ಞರಾದ ಶ್ರೀ ನೂರುಲ್ಲಾ ಹಾವೇರಿ ಮತ್ತು ತೋಟಗಾರಿಕೆ ತಜ್ಞರಾದ ಡಾ. ಸಂತೋಷ್ ಹೆಚ್. ಎಂ. ಭಾಗವಹಿಸಿ ಆಲೂಗಡ್ಡೆ ಮತ್ತು ಟೋಮ್ಯಟೋ ಬೆಳೆಗಳ ಸುಧಾರಿತ ಬೇಸಾಯ ಪದ್ಧತಿಗಳು ಮತ್ತು ಕೀಟ ಮತ್ತು ರೋಗಗಳ ನಿರ್ವಹಣಾ ಕ್ರಮಗಳ ಬಗ್ಗೆ ಮಾಹಿತಿಯನ್ನು ನೀಡಿದರು. ಸುಮಾರು 30 ರೈತ ಮತ್ತು ರೈತಮಹಿಳೆಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು ಅದರ ಪ್ರಯೋಜನವನ್ನು ಪಡೆದುಕೊಂಡರು.

ಕೃಷಿ ವಿಜ್ಞಾನ ಕೇಂದ್ರ, ಕೋಲಾರ ಮತ್ತು ತೋಟಗಾರಿಕೆ ಇಲಾಖೆ ಸಹಯೋಗದಲ್ಲಿ ದಿ: 31.10.2014 ರಂದು ಮುಳಬಾಗಿಲು ತಾಲ್ಲೂಕಿನ ತಿರುಮನಹಳ್ಳಿ ಗ್ರಾಮದಲ್ಲಿ **"ಮಾವಿನ ಕಾಂಡ ಕೊರಕದ ಸಮಗ್ರ ನಿರ್ವಹಣ ಕ್ರಮಗಳು"** ಬಗ್ಗೆ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಕೃಷಿ ವಿಜ್ಞಾನ ಕೇಂದ್ರ, ಕೋಲಾರದ ಮುಖ್ಯಸ್ಥರಾದ ಶ್ರೀ ಕೆ. ತುಳಸಿರಾಮ್ ಭಾಗವಹಿಸಿ ಮಾವಿನ

ಕಾಂಡ ಕೊರಕದ ಸಮಗ್ರ ನಿರ್ವಹಣ ಕ್ರಮಗಳ ಬಗ್ಗೆ ಮಾಹಿತಿಯನ್ನು ನೀಡಿದರು. ಕಾರ್ಯಕ್ರಮದಲ್ಲಿ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರಾದ ಶ್ರೀ ಶಿವಪ್ರಸಾದ್ ಮತ್ತು ಸಹಾಯಕ ತೋಟಗಾರಿಕ ಅಧಿಕಾರಿ ಶ್ರೀ ಪುನಿತ್ ಹಾಜರಿದ್ದರು. ಸುಮಾರು 120 ರೈತ ಮತ್ತು ರೈತಮಹಿಳೆಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು ಅದರ ಪ್ರಯೋಜನವನ್ನು ಪಡೆದುಕೊಂಡರು.

ಕೃಷಿ ವಿಜ್ಞಾನ ಕೇಂದ್ರ, ಕೋಲಾರ ಮತ್ತು ಕೃಷಿ ಇಲಾಖೆ ಸಹಯೋಗದಲ್ಲಿ ದಿ: 11.11.2014 ರಂದು ಕೋಲಾರ ತಾಲ್ಲೂಕಿನ ಹೊಳಲಿಹೊಸೂರು ಗ್ರಾಮದಲ್ಲಿ **"ಖುಷ್ಕಿ ಬೆಳೆಗಳ ಸುಧಾರಿತ ಬೇಸಾಯ ಪದ್ಧತಿ ಮತ್ತು ಕೀಟ ಮತ್ತು ರೋಗಗಳ ನಿರ್ವಹಣೆ"** ಬಗ್ಗೆ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಕೃಷಿ ವಿಜ್ಞಾನ ಕೇಂದ್ರ ಕೋಲಾರದ ವಿಷಯ ತಜ್ಞರುಗಳಾದ ಶ್ರೀಮತಿ ಪ್ರೇಮಲತ ಬಿ.ಆರ್ ಹಾಗೂ ಶ್ರೀ ನೂರುಲ್ಲಾ ಹಾವೇರಿ ಭಾಗವಹಿಸಿ ಮಾಹಿತಿಯನ್ನು ನೀಡಿದರು. ಕಾರ್ಯಕ್ರಮದಲ್ಲಿ ಸಹಾಯಕ ಕೃಷಿ ಅಧಿಕಾರಿ ಶ್ರೀ ರಾಘವೇಂದ್ರ ಹಾಜರಿದ್ದರು. ಸುಮಾರು 70 ರೈತ ಮತ್ತು ರೈತಮಹಿಳೆಯರು ಭಾಗವಹಿಸಿ ಇದರ ಪ್ರಯೋಜನವನ್ನು ಪಡೆದುಕೊಂಡರು.



ಕೃಷಿ ವಿಜ್ಞಾನ ಕೇಂದ್ರ, ಕೋಲಾರ ಮತ್ತು ಕೃಷಿ ಇಲಾಖೆ ಸಹಯೋಗದಲ್ಲಿ ದಿ: 27.11.2014 ರಂದು ಕೋಲಾರ ತಾಲ್ಲೂಕಿನ ಕಿತ್ತಂಡೂರು ಗ್ರಾಮದಲ್ಲಿ **"ತೊಗರಿಯಲ್ಲಿ ಸುಧಾರಿತ ಬೇಸಾಯ ಪದ್ಧತಿ ಮತ್ತು ಸಮಗ್ರ ಕೀಟ ಮತ್ತು ರೋಗಗಳ ನಿರ್ವಹಣೆ"** ಬಗ್ಗೆ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಕೃಷಿ ವಿಜ್ಞಾನ ಕೇಂದ್ರದ ವಿಷಯ ತಜ್ಞರುಗಳಾದ ಶ್ರೀಮತಿ ಪ್ರೇಮಲತ ಬಿ.ಆರ್ ಹಾಗೂ ಶ್ರೀ. ನೂರುಲ್ಲಾ ಹಾವೇರಿ, ಕೋಲಾರ ಭಾಗವಹಿಸಿ ಇದಕ್ಕೆ ಸಂಬಂಧಿಸಿದಂತೆ ಮಾಹಿತಿಯನ್ನು ನೀಡಿದರು. ಕಾರ್ಯಕ್ರಮದಲ್ಲಿ ಸಹಾಯಕ ಕೃಷಿ ಅಧಿಕಾರಿ ಶ್ರೀ ಸುನೀಲ್ ಎನ್ ಹಾಜರಿದ್ದರು. ಸುಮಾರು 70 ರೈತ ಮತ್ತು ರೈತಮಹಿಳೆಯರು ಭಾಗವಹಿಸಿ ಅದರ ಪ್ರಯೋಜನವನ್ನು ಪಡೆದುಕೊಂಡರು.



## ಶ್ರೇಷ್ಠ ತೋಟಗಾರಿಕೆ ರೈತ ಪ್ರಶಸ್ತಿ

2014–15ನೇ ಸಾಲಿನ ಜಿಲ್ಲಾ ಶ್ರೇಷ್ಠ ತೋಟಗಾರಿಕೆ ರೈತ ಪ್ರಶಸ್ತಿಯನ್ನು ಕೋಲಾರ ಜಿಲ್ಲೆಯ ಶ್ರೀ ಚಂದ್ರಶೇಖರ ಎನ್.ಆರ್, ನೆನಮನಹಳ್ಳಿ, ಕೋಲಾರ ತಾಲ್ಲೂಕು, ಇವರಿಗೆ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಬಾಗಲಕೋಟೆಯಲ್ಲಿ 12–15ನೇ ಡಿಸೆಂಬರ್ 2014 ರಂದು ನಡೆದ ಬೃಹತ್ ಉದ್ಯಾನಮೇಳದಲ್ಲಿ ನೀಡಲಾಯಿತು. ಸದರಿ ರೈತರು 15 ಎಕರೆ ಜಮೀನಿನಲ್ಲಿ ಬೇಸಾಯ ಮಾಡುತ್ತಿದ್ದು, 1.06 ಎಕರೆ ಪ್ರದೇಶದಲ್ಲಿ ಲಭ್ಯವಾಗುವ ಮಳೆ ನೀರನ್ನೇ ಬಳಸಿಕೊಂಡು ಪಪ್ಪಾಯ, ಮಾವು, ನುಗ್ಗೆ, ಕುಂಬಳಕಾಯಿ, ರೇಷ್ಮೆ, ರಾಗಿ, ತೊಗರಿ, ಅವರೆ, ಅಲಸಂದೆ, ಹುರುಳಿ ಮುಂತಾದ ಮಿಶ್ರ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ತಮ್ಮ ಜಮೀನಿನಲ್ಲಿ ಬಿದ್ದ ಮಳೆನೀರು ಅಲ್ಲೇ ಇಂಗಲು 3 ಅಡಿ ಉದ್ದ, 3 ಅಡಿ ಅಗಲ, 3 ಅಡಿ ಆಳದ ಇಂಗು ಗುಂಡಿ ನಿರ್ಮಿಸಿದ್ದಾರೆ. ಕೇವಲ 0.30 ಎಕರೆಯಲ್ಲಿ 70 x 50 x 12 ಅಡಿ ಅಳತೆಯ ಕೃಷಿ ಹೊಂಡ ನಿರ್ಮಿಸಿ ಸಂಗ್ರಹವಾದಂತಹ ನೀರನ್ನು ತೋಟಗಾರಿಕೆ ಬೆಳೆಗಳಿಗೆ ಬಳಸುತ್ತಿದ್ದಾರೆ. ಜಮೀನಿನಲ್ಲಿ ಹುರುಳಿ, ಸೆಣಬು, ಡಯಾಂಚಾ ಮತ್ತು ಹಸಿರೆಲೆ ದ್ವಿದಳ ಧಾನ್ಯಗಳನ್ನು ಬೆಳೆದು ಭೂಮಿಯ ಮೇಲೆ ಹೊದಿಕೆಯಾಗಿ ಮಾಡಿ ನೀರಿನ ತೇವಾಂಶ ಒಣಗದಂತೆ ಮತ್ತು ಸಾವಯವ ಅಂಶ ಹೆಚ್ಚಾಗುವಂತೆ ಮಣ್ಣಿನ ಫಲವತ್ತತೆಯನ್ನು ಕಾಪಾಡಿರುತ್ತಾರೆ. ಕೇವಲ 30 ಗುಂಟೆ ಪ್ರದೇಶದಲ್ಲಿ 500 ಗಿಡ ಪಪ್ಪಾಯ, 300 ಮಾವು, 300 ನುಗ್ಗೆ, 1500 ಹಿಪ್ಪುನೇರಳೆ, ಇವುಗಳ ಮಧ್ಯೆ ಅವರೆ, ಅಲಸಂದೆ, ಸೋಯಾಬಿನ್ ಬೆಳೆದು ಬಹುಮಿಶ್ರ ಬೆಳೆಗಳ ಪದ್ಧತಿ ಅಳವಡಿಸಿಕೊಂಡಿದ್ದಾರೆ. ಪ್ರತಿ ಮಾವಿನ ಗಿಡಕ್ಕೆ ಬಾಟಲಿಯಲ್ಲಿ ನೀರುಣಿಸಿ ಉಳಿದ ನೀರನ್ನು ಇತರ ಬೆಳೆಗಳಿಗೆ ಉಪಯೋಗಿಸಿ ಈ ಭಾಗದ ರೈತರಿಗೆ ಮಾದರಿಯಾಗಿದ್ದಾರೆ.





## ರೋಗ ಪೀಡಿತ ಕ್ಷೇತ್ರ ಭೇಟಿ

ಕೃಷಿ ವಿಜ್ಞಾನ ಕೇಂದ್ರ, ಕೋಲಾರದ ವತಿಯಿಂದ ಕೋಲಾರ ಜಿಲ್ಲೆಯ ವಿವಿಧ ಬೆಳೆಗಳಿಗೆ ರೋಗ ಮತ್ತು ಕೀಟಭಾದೆಯ ವೀಕ್ಷಣೆಯನ್ನು ಕಾರ್ಯಕ್ರಮ ಸಂಯೋಜಕರಾದ ಕೆ.ತುಳಸಿರಾಮ, ಡಾ. ಹಿತ್ತಲಮನಿ, ನಿವೃತ್ತ ಹೆಚ್ಚುವರಿ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಡಾ. ವಿ. ನಾಚೇಗೌಡ, ಡೀನ್, ತೋಟಗಾರಿಕೆ ಮಹಾವಿದ್ಯಾಲಯ, ಕೋಲಾರ, ವಿಷಯ ತಜ್ಞರಾದ ಡಾ. ಮಾರುತಿ ಪ್ರಸಾದ, ಡಾ. ಕೆ.ಆರ್. ಶಶಿಧರ್, ಡಾ. ನೂರುಲ್ಲ ಹಾವೇರಿ, ಡಾ. ಸಂತೋಷ್ ಮತ್ತು ಉಮೇಶ ನಾಯ್ಕ ಹಾಗೂ ಕೃಷಿ ಇಲಾಖೆ ಮತ್ತು ತೋಟಗಾರಿಕೆ ಇಲಾಖೆ ಅಧಿಕಾರಿಗಳ ಜೊತೆಯಲ್ಲಿ ಹಮ್ಮಿಕೊಳ್ಳಲಾಗಿತ್ತು. ಸದರಿ ಅವಧಿಯಲ್ಲಿ ತೇರಹಳ್ಳಿ, ಸುಗಟೂರು ಮತ್ತು ಕಿತ್ತೊಂಡೂರು ಗ್ರಾಮಗಳಲ್ಲಿ ಮಾವಿನ ಮರಗಳ ಒಣಗುವಿಕೆ ಮತ್ತು ಸಾಯುವಿಕೆ ಹಾಗೂ ತೋಟಕ್ಕೆ ತಗುಲಿರುವ ಕಾಂಡಕೊರಕ ಹಾವಳಿ, ಸುಗಟೂರು ಗ್ರಾಮದಲ್ಲಿ ರೋಗಪೀಡಿತ ಕ್ಯಾರೆಟ್, ಹೊನ್ನಗಾನಹಳ್ಳಿ, ಲಿಂಗಾಪೂರ, ಖಾದ್ರಿಪೂರದಲ್ಲಿ ಆಲೂಗಡ್ಡೆ ಬೆಳೆಗೆ ತಗುಲಿರುವ ಸ್ಲಿರೋಷಿಯಮ್ ಸೊರಗು ರೋಗ, ಕೊನೆಯ ಅಂಗಮಾರಿ ರೋಗ ಗರುಡನಹಳ್ಳಿ ಗ್ರಾಮದಲ್ಲಿ ನುಗ್ಗೆ ಗಿಡಗಳಿಗೆ ತಗುಲಿರುವ ಕೊಳೆ ರೋಗ, ಮಟ್ನಹಳ್ಳಿ ಗ್ರಾಮದಲ್ಲಿ ಹಿಪ್ಪುನೇರಳೆಗೆ ಎಲೆಸುರುಳಿ ಕೀಟದ ಹಾವಳಿ, ಖಾದ್ರಿಪೂರ ಗ್ರಾಮದಲ್ಲಿ ಹುರುಳಿಕಾಯಿ ಬೆಳೆಗೆ ತಗುಲಿರುವ ಗೋಲ್ಡನ್‌ಎಲ್ಲೋ ಮೊಜ್ಯಾಕ್ ಮತ್ತು ಪಪ್ಪಾಯ ಗಿಡಗಳಿಗೆ ತಗುಲಿರುವ ಉಂಗುರ ಚುಕ್ಕೆ ರೋಗಪೀಡಿತ ಸ್ಥಳಗಳಿಗೆ ಭೇಟಿ ನೀಡಿ ರೈತರಿಗೆ ಸೂಕ್ತ ನಿಯಂತ್ರಣ ಕ್ರಮಗಳ ಬಗ್ಗೆ ಮಾಹಿತಿ ನೀಡಲಾಯಿತು.


| | | |
|---|---|---|
| ಸಂಪಾದಕರು | : | **ಕೆ. ತುಳಸಿರಾಮ್** |
| ಸಹ ಸಂಪಾದಕರು | : | ಡಾ. ಕೆ.ಆರ್. ಶಶಿಧರ್ |
| ಸಹಾಯಕ ಸಂಪಾದಕರು | : | ಡಾ. ಬಿ.ಎಸ್. ಮಾರುತಿ ಪ್ರಸಾದ್, ಶ್ರೀಮತಿ ಬಿ.ಆರ್. ಪ್ರೇಮಲತ, ಶ್ರೀ ನೂರುಲ್ಲಾ ಹಾವೇರಿ ಡಾ. ದೀಪಾ ತೆರದಾಳ, ಡಾ. ಸಂತೋಷ ಹೆಚ್.ಎಂ ಮತ್ತು ಶ್ರೀ ಉಮೇಶ ನಾಯ್ಕ |
| ಅಕ್ಷರ ಜೋಡಣೆ | : | ಶ್ರೀಮತಿ ಸಾವಿತ್ರಿ ರುದ್ರಾಪೂರ್ |
| ಪ್ರಕಾಶಕರು | : | ಕಾರ್ಯಕ್ರಮ ಸಂಯೋಜಕರು<br>ಕೃಷಿ ವಿಜ್ಞಾನ ಕೇಂದ್ರ, ಟಮಕ, ಕೋಲಾರ–563 103<br>ದೂರವಾಣಿ ಸಂಖ್ಯೆ: 08152–243 099<br>ಮಿಂಚಂಚೆ: kvkkolar2012@gmail.com |

DTP, Designed & Printed by: AVA Print-Media, 9901556099, avaprintmedia@gmail.com


ತೆರೆದ–ಅಂಚೆ

ಇವರಿಗೆ:

...........................................................

...........................................................

...........................................................

**ಉಚಿತ ಕೃಷಿ ತಾಂತ್ರಿಕ ಸಲಹೆಗಾಗಿ**
**ಕಿಸಾನ ಕಾಲ್ ಸೆಂಟರ್ 18001801551 ನ್ನು ಸಂಪರ್ಕಿಸಿ**